ಆಯ್ಕೆಯಾದಂತಹ ಎಲ್ಲಾ ಸದಸ್ಯರುಗಳಿಗೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕಾದರೆ ಕೇವಲ ಇಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತವರಿಂದಲೇ ಸಾಧ್ಯವಿಲ್ಲ. ಎಲ್ಲಾ ಸದಸ್ಯರುಗಳು ಸಹಕಾರವನ್ನು ಕೊಟ್ಟಾಗ, ನಾವೇ ರೂಪಿಸಿಕೊಂಡಂತಹ ನಿಯಮಾವಳಿಗಳ ಪ್ರಕಾರ ನಾವೆಲ್ಲರೂ ನಡೆದುಕೊಂಡಾಗ ಖಂಡಿತ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ತಮ್ಮೆಲ್ಲರ ಸಹಕಾರ ಬಹಳ ಮುಖ್ಯವಾಗಿದೆ. ನಿಯಮಾವಳಿಯಂತೆ ನಾವು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಮತ್ತೊಮ್ಮೆ ನಿಮ್ಮೆಲ್ಲರ ಸಹಕಾರವನ್ನು ಕೋರಿ ಮುಂದಿನ ದಿನಗಳಲ್ಲಿ ತಾವು ಏನು ನನ್ನ ಮೇಲೆ ವಿಶ್ವಾಸವನ್ನಿಟ್ಟು ನಮ್ಮ ಜಿಲ್ಲೆಯ ಬಗ್ಗೆ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಬಹಳ ವಿನಯಪೂರ್ವಕವಾಗಿ ಗೌರವದ ಮಾತುಗಳನ್ನಾಡಿದ್ದೀರಿ. ಆ ವಿಶ್ವಾಸ ಮತ್ತು ನಮ್ಮ ಜಿಲ್ಲೆಯ ಬಗ್ಗೆ ಇಟ್ಟಂತಹ ಗೌರವ ಹಾಗೂ ನಂಬಿಕೆಗೆ ಯಾವುದೇ ರೀತಿಯಲ್ಲಿ ಚ್ಯುತಿಬಾರದ ಹಾಗೆ ನಿಷ್ಪಕ್ಷಪಾತವಾಗಿ ನಾನು ಕಾರ್ಯ ನಿರ್ವಹಿಸುತ್ತೇನೆಂಬ ಭರವಸೆಯನ್ನು ತಮ್ಮ ಮುಂದೆ ಕೊಡುತ್ತೇನೆ. ಮತ್ತೊಮ್ಮೆ ಈ ಒಂದು ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ನಿಮಗೆಲ್ಲರಿಗೂ ನಮಸ್ಕಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾವು ಕಾರ್ಯಕ್ರಮ ಪಟ್ಟಿಯಂತೆ ಮುಂದುವರೆಸೋಣ.

2.ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ:ಶಾಸಕ ಶ್ರೀ ರಘುಪತಿ ಭಟ್‌ರವರ ಪತ್ನಿಯಾದ
ಶ್ರೀಮತಿ ಪದ್ಮಪ್ರಿಯರವರ ಸಂಶಯಾಸ್ಪದ ಸಾವಿನ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ ಉಡುಪಿಯಲ್ಲಿ ಶ್ರೀಮತಿ ಪದ್ಮಪ್ರಿಯ ರವರ ಸಾವು ಸಂಶಯಾಸ್ಪದವಾಗಿದೆ. ಇದರ ತನಿಖೆಯೂ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಸರ್ಕಾರದ ಪರವಾಗಿ ಗೃಹಸಚಿವರು, ಪೋಲೀಸರು ಕೊಟ್ಟಿರುವಂತಹ ಹೇಳಿಕೆ ಒಂದಕ್ಕೊಂದು ತದ್ವಿರುದ್ದವಾಗಿದೆ. ಮತ್ತು ಈ ಪ್ರಕರಣ ಜನರ ಮನಸ್ಸಿನಲ್ಲಿ ತುಂಬಾ ಸಂಶಯವನ್ನು ಉಂಟುಮಾಡಿದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸರ್ಕಾರ ಈ ವಿಷಯದಲ್ಲಿ ತೆರೆದ ಮನಸ್ಸಿನಿಂದ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ನಡೆಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ಬಗ್ಗೆ ಒಂದು ಸ್ಪಷ್ಟವಾದಂತಹ ಚಿತ್ರಣವನ್ನು ಜನತೆಯ ಮುಂದಿಡಬೇಕಾಗಿರುವುದರಿಂದ ಇದನ್ನು ಅತ್ಯಂತ ಆದ್ಯತೆಯ ಮೇಲೆ ಚರ್ಚಿಸುವ ಸಲುವಾಗಿ ಹಾಗೂ ಈ ವಿಷಯವನ್ನು

ತಾವು ಸಿಬಿಐಗೆ ಒಪ್ಪಿಸಬೇಕೆಂದು ಹೇಳಿ ನಾನು ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಅದಕ್ಕೆ ಈ ಸೂಚನೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಟ್ಟರೆ ಖಂಡಿತವಾಗಿ ಕೆಲವು ವಿಷಯಗಳನ್ನು ನಿಮ್ಮ ಮುಂದೆ ನಾನು ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ನಾನು ಕೂಡ ಬಹಳ.....

ಡಾ:ವಿ.ಎಸ್.ಆಚಾರ್ಯ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನನಗೆ ಒಂದು ಮಿನಿಟ್ ಅವಕಾಶವನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ವಿಷಯವನ್ನು ....

ಶ್ರೀ ವಿ.ಎಸ್.ಆಚಾರ್ಯ: ನನಗೆ ಒಂದು ಅವಕಾಶವನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು Point of order ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ನಿಲುವಳಿ ಸೂಚನೆ ಬಗ್ಗೆ ನಾನು ಮಾತನಾಡಿದ ನಂತರ ನಿಮಗೆ ಅವಕಾಶ ಸಿಗುತ್ತದೆ. Either Ihave to leave this House, or you have to raise point of order, I will keep quiet ಸಾರ್ ಎಂದು ಹೇಳಿದರೆ ನಾನೇನು ಮಾಡಬೇಕು?

ಅಧ್ಯಕ್ಷರು:ಮಾನ್ಯ ವಿರೋಧಪಕ್ಷದ ನಾಯಕರು premliminary ಮುಗಿಸಲಿ. ಆಮೇಲೆ ತಾವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಗಂಭೀರವಾದಂತಹ ವಿಚಾರವಿದೆ. ಮತ್ತು ನನಗೆ ನಿಜವಾಗಲೂ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಸಂತೋಷವೇನು ಆಗುತ್ತಿಲ್ಲ. ಏಕೆಂದರೆ, ಈ ಮನೆಯ ಸದಸ್ಯರು ಕೂಡ ಈಗಾಗಲೇ ನೋವಿನಿಂದ ಅವರು ಬಳಲುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಪುನಃಪುನಃ ನಾವು ಕೆದಕುವುದಕ್ಕೆ ಹೋಗುವಂತದ್ದು ಸರಿಯಾಗುವುದಿಲ್ಲವೆಂದು ಒಂದು ಕಡೆಯಾದರೆ ಇನ್ನೊಂದು ಕಡೆ Home Minister ಅವರ ಜಿಲ್ಲೆಯ ಸಮಸ್ಯೆ, ಅವರ ತಾಲ್ಲೂಕು ಸಮಸ್ಯೆ, ಆ ತಾಲ್ಲೂಕಿನ ಸಮಸ್ಯೆಯನ್ನು ಅವರು ಸರಿಯಾದ ರೀತಿಯಿಂದ ನೋಡಿಕೊಳ್ಳದೆ ಇದ್ದಾಗ ಏನು ಪರಿಸ್ಥಿತಿ, ಇವತ್ತು

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ., Point of Order, ದಯಮಾಡಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ಅವರು ಮಾತನಾಡಿ ಮುಗಿಸಲಿ.

ಶ್ರೀ ಎ.ರಾಮದಾಸ್: ವಿಚಾರ ಮಂಡನೆಗೆ ಅವಕಾಶ ಇಲ್ಲದೆ ಇರುವುದರಿಂದ ಸನ್ಮಾನ್ಯ ಅಧ್ಯಕ್ಷರಲ್ಲಿ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಒಂದು ಮಿನಿಟ್, ಅವಕಾಶವನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕಾಗಿ 11ನೇ ಜೂನ್

ಅಧ್ಯಕ್ಷರು: ಅವರು facts ಹೇಳುವುದಕ್ಕಿಂತ ಮುಂಚೆ ಏನು ಹೇಳುತ್ತಾರೆಂದರೆ ಗೃಹ ಮಂತ್ರಿಗಳು, ಈ ವಿಷಯದ ಬಗ್ಗೆ ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂತಹ ಸೆಕ್ಷನ್‌ನಲ್ಲಿ ಬರುವುದಿಲ್ಲವೆಂದು ಅವರು ಹೇಳಲಿ. ಹೇಗೆ ಬರುತ್ತದೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು: Yes, Yes. ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಿಡಿ ಎಂದರೆ ಏನರ್ಥ? ಯಾವ ರೂಲ್ಸ್ ಕೆಳಗೆ ಬಿಡಬೇಕು? ಅಥವಾ ಇಂತಹ ರೂಲ್ಸ್ ಇದೆ ಆ ರೂಲ್ಸ್ ಕೆಳಗಡೆ ಬಿಡಿ ಎಂದು ಹೇಳಿ ಸಾರ್. ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ. ನಾವು ನೀವು ಎಲ್ಲರೂ ಇಲ್ಲಿ ಒಂದೇ.

ಡಾ:ವಿ.ಎಸ್.ಆಚಾರ್ಯ:ಈಗ ಅವರು ಎತ್ತಿರುವಂತಹ ವಿಷಯ ಗಂಭೀರವಾದುದು ಎಂದು ನಾನು ಒಪ್ಪುತ್ತೇನೆ. ಇದು ಅತ್ಯಂತ ದಾರುಣವಾದಂತಹ ಸಂಗತಿಯೂ ಹೌದೆಂದು ನಾನು ಒಪ್ಪುತ್ತೇನೆ. ಆದರೆ ಇಡೀ ಪ್ರಕರಣ ಅದು ಪ್ರಾರಂಭದಲ್ಲಿ ಒಂದು missing case ಎಂದು ಮಣಿಪಾಲ್‌ನಲ್ಲಿ ದಾಖಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: He should say that, this cannot be raised under the so and so rule. ನೀವೇ ಹೇಳಿದ್ದೀರಿ ಮಾಲೂರಿನಲ್ಲಿ ಸಿಕ್ಕಿದ್ದಾರೆ. She is safe ಅಂತ. On what basis ನೀವು ಹೇಳಿದ್ದೀರಿ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಡಾಕ್ಟರ್ ವಿ.ಎಸ್.ಆಚಾರ್ಯರವರು ಹೇಳತಕ್ಕಂಥ ಅವಶ್ಯಕತೆಯಿಲ್ಲ. ವಿಷಯವನ್ನು ರೈಸ್ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದೇವೆ. ನಾವು ಇನ್ನೂ ವಿಷಯವನ್ನು ಹೇಳದೇ ಇರುವಾಗ ಅವರು ಮಾತನಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ

ಡಾ: ವಿ.ಎಸ್.ಆಚಾರ್ಯ: ಇದು ನ್ಯಾಯಾಲಯದಲ್ಲಿರುವಂತಹ ಪ್ರಕರಣವಾಗಿದೆ. ಹಾಗೆಯೇ ಇದಕ್ಕೆ ಸಂಬಂಧಪಟ್ಟಂತೆ investingatin ಕೂಡ ಮುಂದುವರಿಯುತ್ತಿದೆ. ಇಂತಹ ಪ್ರಕರಣವನ್ನು ನಮ್ಮ ನಿಯಮಾವಳಿಗಳ ಪ್ರಕಾರ ನಿಲುವಳಿ ಸೂಚನೆಯಲ್ಲಿ ಎತ್ತುವುದಕ್ಕೆ ಬರುವುದಿಲ್ಲ. ಮೇಲ್ಮನೆಯಲ್ಲಿ ಮಾನ್ಯ ಸಭಾಪತಿಗಳು ಇಂತಹದ್ದೇ–ಸಂದರ್ಭ ಬಂದಾಗ ಎಲ್ಲವನ್ನು ಕೋಟ್ ಮಾಡಿ ಇದು ನಿಲುವಳಿ ಸೂಚನೆಯ ಪ್ರಕಾರ ಬರುವುದಿಲ್ಲ. ಇನ್ಯಾವುದೇ ರೀತಿಯಿಂದ ಇದನ್ನು ಎತ್ತಬಹುದು ಎಂಬ ತೀರ್ಪನ್ನು ಕೊಟ್ಟಿದ್ದಾರೆ. ನಾನು ತಮ್ಮಲ್ಲಿ ಅರಿಕೆ

ಮಾಡಿಕೊಳ್ಳುತ್ತಿದ್ದೇನೆ. ಇದು ನ್ಯಾಯಾಲಯದೊಳಗಿರುವುದರಿಂದ ಇಲ್ಲಿ ನಮ್ಮ ಉಡುಪಿ ನ್ಯಾಯಾಲಯದ ಎದುರು ಮತ್ತು ನವದೆಹಲಿ ನ್ಯಾಯಾಲಯದ ಎದುರು ಇದೆ. ಹಾಗಾಗಿ ಈ ಪ್ರಕರಣವನ್ನು ಹಲವಾರು ಪೂರ್ವ ಉದಾಹರಣೆಯನ್ನು ಕೊಟ್ಟು ಮಾನ್ಯ ಸಭಾಪತಿಯವರು ಚರ್ಚೆಗೆ ಅವಕಾಶವನ್ನು ಕೊಡಲಿಲ್ಲ. ತಾವು ದಯವಿಟ್ಟು ಚರ್ಚೆಗೆ ಅವಕಾಶವನ್ನು ಕೊಡಬಾರದು ಎಂದು ನಾನು ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ರಾಮದಾಸ್‌ರವರೆ, ತಾವು ಮಾತನಾಡಿ.

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು: ಮಾನ್ಯ ಬಿ.ಸಿ.ಪಾಟೀಲ್‌ರವರೆ, ಮಾನ್ಯ ವಿರೋಧಪಕ್ಷದ ನಾಯಕರು ಏನಾದರೂ ಹೇಳುತ್ತಾರೆ. ತಾವು ಕುಳಿತುಕೊಳ್ಳಿ. ಅವರು ಮಾತನಾಡಿದ ಮೇಲೇ ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಎ.ರಾಮದಾಸರು:ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತರುವಂತಹ ಸಂದರ್ಭದಲ್ಲಿ ನಿಯವ 62ರ Sub-section(7)ರ ಪ್ರಕಾರ ನಿಲುವಳಿ ಸೂಚನೆಯೂ ಭಾರತದ ಯಾವುದೇ ಭಾಗದಲ್ಲಿ ಅದರ ಅಧಿಕಾರದ ವ್ಯಾಪ್ತಿಯಲ್ಲಿ ಬರುವಂತಹ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರಬಾರದು ಎನ್ನುವಂತಹ ಅಂಶ ಇದೆ.

ಮೊದಲನೇಯ ನಿಬಂಧನೆ ಇರುವಂಥಾದ್ದೇ ಭಾರತ ದೇಶದ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಕಟ್ಟಳೆ ಇದ್ದಂತಹ ಸಂದರ್ಭದಲ್ಲಿ ಅದನ್ನು ನಿಲುವಳಿ ಸೂಚನೆಯಾಗಿ ಕೂಡ ಮಂಡನೆ ಮಾಡಲು ಅವಕಾಶವಿಲ್ಲ ಎನ್ನುವುದು ಮೊದಲನೆಯದು. ಹಾಗೆಯೇ, ಅದು ಮುಂದುವರೆದು 63ರಲ್ಲೂ ಈ ನಿಯಮಾವಳಿಯಲ್ಲಿ ಎಲ್ಲಿಯೂ relaxation ಕೊಟ್ಟಿಲ್ಲ. ಹಾಗಾಗಿ, ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ವಿಚಾರವನ್ನು, ಇನ್ನೂ ಇತ್ಯರ್ಥವಾಗದಿರುವ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವಂಥಾದ್ದು sub-judice ಆಗುತ್ತದೆ. ಹಾಗಾಗಿ, ಈ ನಿಯಮಾವಳಿಯಡಿ ಇದನ್ನು ತರಲು ಅವಕಾಶ ಇಲ್ಲದಿರುವುದರಿಂದ ಇದಕ್ಕೆ ಅವಕಾಶ ಕೊಡಬಾರದೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಸಾ:ವಿ.ಎಸ್.ಆಚಾರ್ಯ: ಇದೇ ನನ್ನ Point of order.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇರಲಿ, ನಿಮ್ಮ Point of orderಗೆ ನಾನು ಉತ್ತರ ಕೊಡುತ್ತೇನೆ. ಇದು ಯಾವುದೇ ನ್ಯಾಯಾಲಯದಲ್ಲಿ investigation ಆಗಿ ಚಾರ್ಜ್‌ಶೀಟ್ ಆಗಿ, ಕೇಸ್ ಫೈಲ್ ಮಾಡಿ, ಕೇಸ್ ನಡೆದಂತಹ ವಿಚಾರವಲ್ಲ. ನಾವು ಡಿಮ್ಯಾಂಡ್ ಮಾಡುವುದೇ ಸರಿಯಾಗಿ investigation ನಡೆದಿಲ್ಲ. Investigation

ಸರಿಯಾಗಿ ಆಗಬೇಕಾಗಿದ್ದರೆ ಅದು ನಿಮ್ಮಿಂದ ಆಗುವುದಿಲ್ಲ. ಏಕೆಂದರೆ, You are also party to this and you know the facts. ಆ facts ನ್ನು ಮರೆಮಾಚಲು ಏನು ಬೇಕೋ ಅದನ್ನು ಮಾಡಬಹುದು ಎನ್ನತಕ್ಕ ಸಂಶಯ ಮೂಡಿದ ಮೇಲೆ ತಾವು ಇದನ್ನು ನಿರ್ವಹಿಸಬಾರದು, ಇದನ್ನು ನೇರವಾಗಿ ಸಿ.ಬಿ.ಐ.ಗೆ ವಹಿಸಿಕೊಡಬೇಕೆಂಬ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿದ್ದೇವೆಯೇ ಹೊರತು ಯಾವುದೇ investigation ಇಲ್ಲ. ಕೇಸೂ ಫೈಲ್ ಆಗಿಲ್ಲ. ಇವತ್ತಿನ ದಿವಸ ಆ incident occur ಆಗಿದ್ದು, ಮನೆ ಬಿಟ್ಟಿದ್ದು, ಉಡುಪಿಯಿಂದ ಗೋವಾಕ್ಕೆ ಹೋಗಿ, ನಿಮ್ಮ ಹೇಳಿಕೆ ಪ್ರಕಾರ ಗೋವಾ ಮತ್ತು ದೆಹಲಿಯಲ್ಲಿ ಘಟನೆ ನಡೆದು ಅಲ್ಲಿ ನೀವು ಮರ್ಡರಗ ಆಯಿತು, suicide ಆಯಿತು, ಏನಾಯಿತು ಎನ್ನತಕ್ಕಂಥಾದ್ದನ್ನು ಮೂರು ರಾಜ್ಯಗಳಲ್ಲಿ ಈ ಘಟನೆ ನಡೆದ ಕಾರಣ ನಾವು ಇದನ್ನು ಸಿಬಿಐಗೆ ವಹಿಸಿಕೊಡಬೇಕೆಂಬ ಪ್ರಸ್ತಾವನೆಯನ್ನು ಇಟ್ಟಿದ್ದೇವೆಯೇ ವಿನಾ ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ.

ಆದ್ದರಿಂದ, ಇದು ಕೋರ್ಟಿಗೆ ಹೋಗತಕ್ಕ ಪ್ರಶ್ನೆ ಎಲ್ಲಿದೆ? ಕೋರ್ಟ್‌ಗೆ, ಸ.ಬಿ.ಐ.ಗೆ ಹೋಗಬೇಕೆ? ಬೇಡವೇ? ಎಂದು ಇದೆಯೇ? ಅಥವಾ investigation ಮಾಡಿ ಚಾರ್ಜ್‌ಶೀಟ್ ಹಾಕಿದ್ದೀರಾ? ಅಥವಾ ನಿಮ್ಮ ಚಾರ್ಜ್‌ಶೀಟ್ ಮೇಲೆ ಇವತ್ತು ಕೋರ್ಟ್‌ನಲ್ಲಿ ಏನಾದರೂ ಕಟ್ಟೆ ನಡೆದಿದೆಯೇ? ಇವತ್ತು ಬೇರೆ ರೀತಿಯಿಂದ ಅತುಲ್‌ರಾವ್ ಮೇಲೆ ನೀವು ಏನು ಕೆಲವು ಕ್ರಮಗಳನ್ನು ಜರುಗಿಸಬೇಕೆಂದು ಮಾಡಿದ್ದೀರಿ, ಅವರ ಪರವಾಗಿ ಹೋದಂಥಾದ್ದೇ ಇರಬಹುದು ಅಥವಾ ಪದ್ಮಪ್ರಿಯರವರ ಪರವಾಗಿ ಅವರ ತಾಯಿಯವರೇ ಹೋದಂತಹ ಘಟನೆಗಳಿರಬಹುದು, ಅದೆಲ್ಲವೂ ಬೇರೆ ವಿಚಾರ. ನಾನು ಆ ಯಾವ ಗೋಜಿಗೂ ಹೋಗುತ್ತಿಲ್ಲ. ನಾನು ಮೊದಲೇ ಹೇಳಿದೆ. ನಿಜವಾಗಿಯೂ ಈ ವಿಷಯವನ್ನು ಪ್ರಸ್ತಾಪಿಸಲು ನಮಗೆ ನೋವಾಗುತ್ತದೆ. ಆದರೂ ಕೂಡ ಸತ್ಯಾಂಶ ಹೊರಗೆ ಬರಬೇಕು. ಏಕೆಂದರೆ, ನೀವು ಗೃಹ ಸಚಿವರಾಗಿ ನಮ್ಮನ್ನು ತಪ್ಪು ದಾರಿಗೆಳೆಯುವ ಮಾಹಿತಿಯನ್ನು ಕೊಟ್ಟೀರಿ. ಪತ್ರಿಕೆಯಲ್ಲಿ ಅನೇಕ ಸಲ ಬಂತು. ಪದ್ಮಪ್ರಿಯರವರು ಸೇಫ್ ಆಗಿದ್ದಾರೆ, ನಾವು ತಂದು produce ಮಾಡುತ್ತೇವೆ. ಇದನ್ನೇ ಪೋಲೀಸರೂ ಹೇಳಿದರು. ತಾವೂ ಅದನ್ನೇ ಹೇಳಿದಿರಿ. ಮತ್ತು ನೀವೇ ಹೋಗಿ examine ಮಾಡಿದ್ದಂತೆ, ದೆಹಲಿಯಲ್ಲಿ ಯಾವಾಗ ಆ ಅಪಾರ್ಟ್‌ಮೆಂಟ್‌ನಲ್ಲಿ ಪದ್ಮಪ್ರಿಯರವರ ಏನು; ಮರ್ಡರ್ ಆಗಿತ್ತು, ನೇಣು ಹಾಕಿಕೊಂಡಿದ್ದರು, suicide ಎಂದು ನೀವೇ ಫೈಸಲ್ ಮಾಡಿಬಿಟ್ಟಿರಿ. ಇದು suicide case, ಇಷ್ಟು ಗಂಟೆಗೆ ಆಗಿದೆ, ಈ ರೀತಿ ಮಾಡಲು ನೀವು ಯಾರು? ನಿಮಗೆ ಇದರ ಬಗ್ಗೆ ಯಾರಾದರೂ ಕೇಳಿದ್ದಾರೆಯೇ?

ನೀವು ಡಾಕ್ಟರ್ ಇರಬಹುದು. I respect your profession. You are a good man. That is different. Your good thing cannot be counted every time. ಏನೆಂದರೆ, ಎಲ್ಲಾ ಒಳ್ಳೆಯದನ್ನೇ ಮಾಡುತ್ತೀರೆಂದಲ್ಲ. ಕೆಲವು ಸಲ ಇಂತಹ ತಪ್ಪುಗಳಾಗುತ್ತವೆ. ತಾವು ಹೇಳಿಬಿಟ್ಟಿರಿ. ನಿಮ್ಮ ಹೇಳಿಕೆಯಿಂದ ನಿಮ್ಮ ಇಲಾಖೆಯ ಮೇಲೆ ಪರಿಣಾಮ ಆಗುವುದಿಲ್ಲವೆ? ನಮ್ಮ ಮಂತ್ರಿಯವರೇ ಈ ರೀತಿ ಹೇಳುತ್ತಾರೆಂದರೆ ಇದನ್ನು ನಾವೇನು suicide ಎಂದು ತೆಗೆದುಕೊಳ್ಳೋಣವೇ? ಮರ್ಡರ್ ಎಂದು ತೆಗೆದುಕೊಳ್ಳೋಣವೆ? ಏನೆಂದು ತೆಗೆದುಕೊಳ್ಳೋಣ? ಎಂಬುದಾಗಿ ಬರುವುದಿಲ್ಲವೆ? ನಾವು ಒಬ್ಬ ನಾವು ಒಬ್ಬ ಮನುಷ್ಯನಾಗಿ ಎಲ್ಲಿ ಹೇಗೆ ಮಾತನಾಡಬೇಕು, ಮಾತನಾಡಬಾರದು ಎಂಬ ವಿವೇಚನೆ ಇರಬೇಕೇ? ಬೇಡವೇ? ನಾವು ನಿಮ್ಮ ಹೇಳಿಕೆಯನ್ನು ಹೇಳಲೇ? ಇಲ್ಲಿ ಓದಲೇ? ಆದ್ದರಿಂದ, ನನಗೆ ನೀವು ಅವಕಾಶ ಮಾಡಿಕೊಡಿ, ನಾನು ಬೇರೆ ಯಾವುದೇ ಕೋರ್ಟ್‌ನಲ್ಲಿ ಇರತಕ್ಕ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಪ್ರಸ್ತಾಪ ಮಾಡುವ ಪ್ರಶ್ನೆಯೂ ಇಲ್ಲ. ಏಕೆಂದರೆ, ನಿಮ್ಮ investigation ಸರಿಯಾದ ರೀತಿಯಿಂದ ನಡೆದಿಲ್ಲ, ನೀವು ಚಾರ್ಜ್‌ಶೀಟನ್ನೇ ಹಾಕಿಲ್ಲ, ಮತ್ತು ಅದಕ್ಕಿಂತಲೂ ಮೊದಲು ನಿಮ್ಮ contradictory ಹೇಳಿಕೆಗಳಿವೆ. ಅದನ್ನು ನೀವು ಹೇಗೆ ಸಮರ್ಥಿಸುತ್ತೀರಿ? ಏಕೆಂದರೆ, ಈ ಒಂದು ಮರ್ಡರ್ ಹಿನ್ನೆಲೆಯಲ್ಲಿ ಯಾರು ಇದ್ದಾರೆ ಎಂಬುದು ಹೊರಗಡೆ ಬಾರದಿದ್ದರೆ ನಾಳೆ ಇದೇ ರೀತಿ ಅಧಿಕಾರ ಇದೆ, ಸರ್ಕಾರವಿದೆ ಅಥವಾ ನಾವು ಹೇಳಿದ್ದು ನಡೆಯುತ್ತದೆಂದರೆ, ಎಲ್ಲರೂ ಅಧಿಕಾರದಲ್ಲಿ ಇದ್ದಂತಹವರು ಇದೇ ರೀತಿಯಾಗಿ ದುರುಪಯೋಗ ಮಾಡಿಕೊಳ್ಳುತ್ತಾರೆ. ಅದಕ್ಕೋಸ್ಕರ,

ಶ್ರೀ ಸಿ.ಟಿ.ರವಿ: ಮರ್ಡರ್ ಎಂದು certificate ಕೊಡುತ್ತಿದ್ದಾರಲ್ಲ, ಇವರದ್ದೇ ಏನಾದರೂ ಕೈವಾಡ ಇದೆಯೇ?

(ಈ ಹಂತದಲ್ಲಿ ಮಾನ್ಯ ಸಚಿವರಾದ ಶ್ರೀ ಬಿ.ಎನ್.ಬಚ್ಚೇಗೌಡರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು: ಬಚ್ಚೇಗೌಡರೆ, ಅವರು ಮೊದಲು ಪೂರ್ಣಗೊಳಿಸಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಈಲ್ಡ್ ಆಗಿಲ್ಲ.

ಶ್ರೀ ಸಿ.ಟಿ.ರವಿ: ಮರ್ಡರ್ ಎಂದು ಇವರೆ certificate ಕೊಡುತ್ತಿದ್ದಾರೆ. ಆದ್ದರಿಂದ ಇವರದ್ದೇ main witness ಆಗಿ

(ಗೊಂದಲ)

ಅಧ್ಯಕ್ಷರು: ಸಿದ್ದು ಸವದಿಯವರೆ, ನಾಗಮಾರಪಲ್ಲಿಯವರೆ, ದಿನೇಶ್ ಗುಂಡೂರಾವ್‌ರವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ: ವಿರೋಧ ಪಕ್ಷದ ನಾಯಕರು ಮರ್ಡರ್ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ರವಿಯವರೆ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದು ಮರ್ಡರೋ ಅಥವಾ ಸೂಯಿಸೈಡೋ ಎಂಬುದನ್ನು decide ಮಾಡುವುದು investigation.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು: ಅವರು ಪ್ರಿಲಿಮಿನರಿ ಸಬ್ಮಿಷನ್ ಮಾಡುತ್ತಿದ್ದಾರೆ. ಅವರದು ಮುಗಿದ ಮೇಲೆ ನಿಮಗೂ ಅವಕಾಶ ಕೊಡುತ್ತೇನೆ. ಬಚ್ಚೇಗೌಡರೆ, ಮೊದಲು ಅವರು ಪೂರ್ಣ ಮಾಡಲಿ. ಅನಂತರ, ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಇದು ಎರಡು ತಿಂಗಳ ಹಿಂದೆ ಆಗಿರುವ ಪ್ರಕರಣ. ನಿಯಮ 60ರ ಅಡಿಯಲ್ಲಿ ತೆಗೆದುಕೊಳ್ಳಲು ಬರುವುದಿಲ್ಲ. It is not a recent occurrence .....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವರು ಏನು ಹೇಳಿದರು: It should be a recent occurrence, It should be a public importance. ಹೌದೋ?

ಶ್ರೀ ಬಿ.ಎನ್.ಬಚ್ಚೇಗೌಡ: ಹೌದು. It is a recent occurrence. ಈ ಘಟನೆಯಾಗಿ 2 ತಿಂಗಳಾಗಿದೆ.

ಡಾ:ವಿ.ಎಸ್.ಆಚಾರ್ಯ: ನನ್ನದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ಅವರು ಪೂರ್ಣ ಮಾಡಲಿ.

ಡಾ:ವಿ.ಎಸ್.ಆಚಾರ್ಯ: ಅವರು ಮುಂದುವರೆಸಿ ಏನೇನೋ ಹೇಳುತ್ತಿದ್ದಾರೆ.

ಅಧ್ಯಕ್ಷರು: ಅವರು facts ಹೇಳದಿದ್ದರೆ ನಾನೂ ಅವರಿಗೆ allow ಮಾಡುವುದಿಲ್ಲ. ಅವರು ಮೊದಲು ಪ್ರಿಲಿಮನರಿ ಸಬ್ಮಿಷನ್ ಮಾಡಲಿ.

ಡಾ:ವಿ.ಎಸ್.ಆಚಾರ್ಯ: ಎರಡು points ಇದೆ, ಒಂದು, ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯದ ಬಗ್ಗೆ ಇರಬೇಕು. ಇದು ನಿರ್ದಿಷ್ಟ ವಿಷಯವಲ್ಲ. ಇದು ಜೂನ್‌ನಲ್ಲಿ ಆಗಿರುವಂಥಾದ್ದು. ರಾಜ್ಯಪಾಲರ ಭಾಷಣ ಆದ ನಂತರ ಮೂರು ದಿವಸ ಸದನ ನಡೆಯಿತು. ಮತ್ತೆ ಇಂದು 29ನೇ ತಾರೀಖು. ಹೀಗಿರುವಾಗ, ಇದು recent ಅಲ್ಲ. ಎರಡನೇಯದು, 62(7)ರಂತೆ ನಿಲುವಳಿ ಸೂಚನೆಯು ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿರತಕ್ಕದಲ್ಲ. ಇವತ್ತು ಈ ವಿಷಯ ಉಡುಪಿ ನ್ಯಾಯಾಲಯದ ಎದುರು ಮಣಿಪಾಲ್ ಪೋಲೀಸ್‌ನವರು 104/08ರ ಗುನ್ನೆಯ ಪ್ರಕಾರ ಒಂದು

ಇದೆ. ಇನ್ನೊಂದು, 109/08ರ ಗುನ್ನೆ ಉಡುಪಿ ನ್ಯಾಯಾಲಯದಲ್ಲಿದೆ. 3–4 ಬಾರಿ ಉಡುಪಿಯ ಜಿಲ್ಲಾ ನ್ಯಾಯಾಧೀಶರು ಆ ಪ್ರಕರಣದಲ್ಲಿ ತಮ್ಮ interim order ಅನ್ನು ಕೊಟ್ಟಿರುವುದು ಇದೆ. ಅನಂತರ, ದೆಹಲಿಯಲ್ಲಿ ಆದಂತಹ ಈ ಘಟನೆಗೆ ದೆಹಲಿಯ ದ್ವಾರಕಾ ಪೋಲೀಸ್ ಸ್ಟೇಷನ್‌ನವರು ಡಿ.ಡಿ.35 ಎಂದು ಹೇಳುವಂತಹ ಒಂದು ಕೇಸಿನ ಪ್ರಕಾರ ಅಲ್ಲಿಯ ನ್ಯಾಯಾಲಯದ ಮುಂದಿದೆ. ದಯವಿಟ್ಟು ಈ ಕೇಸನ್ನು ಈಗ ನಾವು ಇಲ್ಲಿ ಚರ್ಚೆ ಮಾಡಲು ಈ ವಿಧಿಯ 7ನೇ ಸೆಕ್ಷನ್ ಪ್ರಕಾರ ಅವಕಾಶವಿಲ್ಲ. ಮೊದಲಿನ ವಿಷಯಕ್ಕೆ ಸಂಬಂಧಿಸಿದಂತೆ, A matter is urgent only if it is of very recent occurrence and must be raised at the first available opportunity. Matters arising during the period when the house is not in session should be raised on the first day of the session when the house meets. A matter which has been continuing for sometimes cannot be raised during the adjournment motion ಎಂದು ಸ್ಪಷ್ಟವಾಗಿ ಕೌಲ್ ಅಂಡ್ ಶಕ್ದರ್‌ನಲ್ಲಿ ಮಲ್‌ಹೋತ್ರಾರವರು ರಚಿಸಿರುವ ಪುಸ್ತಕದಲ್ಲಿದೆ. ನಾನು ಈಗ ಹೇಳುವುದಿಷ್ಟೆ: ಅವರು ಇದನ್ನು ನಿಲುವಳಿ ಸೂಚನೆ ಪ್ರಕಾರ ತರುವಂಥಾದ್ದಲ್ಲ. ಇದು ನ್ಯಾಯಾಲಯದ ಮುಂದಿದೆ, ವಿಚಾರಣೆ ನಡೆಯುತ್ತಿದೆ. ಎರಡು ರಾಜ್ಯಗಳಿವೆ. ಕರ್ನಾಟಕ ಮತ್ತು ದೆಹಲಿ, ಈ ಎರಡೂ ರಾಜ್ಯಗಳ ನ್ಯಾಯಾಲಯಗಳಲ್ಲಿವೆ. ಹಾಗಾಗಿ, ಇದಕ್ಕೆ ದಯವಿಟ್ಟು ಅವಕಾಶ ಕೊಡಬಾರದು. ಯಾವುದೇ ಚರ್ಚೆ ಇಂತಹ ಸಂದರ್ಭದಲ್ಲಿ ನಡೆದರೆ ಅದು ಕೋರ್ಟಿನ ನಿರ್ಧಾರದ ಮೇಲೆಯೂ ಪರಿಣಾಮ ಉಂಟಾಗಬಹುದೆಂಬ ದೃಷ್ಟಿಯಿಂದ ಈ ಮನವಿಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, Sucide cannot form subject matter of the adjournment motion, dated: 27th March 1965.

The Leader of the opposition Sri S.Shivappa sought to bring the issue of suicide by one Sri.N.G.chamaiah of nuggehalli, in the form of an Adjournment motion. The Honourable Speaker observed Suicide however grave, however tragic it may be / cannot be allowed in the form of an journment motion.

ಶ್ರೀ ಆರ್.ತೋಷನ್‌ಬೇಗ್:ಸೂಯಿಸೈಡ್ ಎಂದು ತಾವೇನು ಹೇಳತ್ತಿದ್ದೀರಿ?

ಶ್ರೀ ಬಿ.ಎನ್.ಬಚ್ಚೇಗೌಡ: No. No. ವಿರೋಧ ಪಕ್ಷದ ನಾಯಕರು ಸೂಯಿಸೈಡ್ ಎಂದು ಹೇಳಿದರಲ್ಲ?

ಶ್ರೀ ಆರ್.ರೋಷನ್‌ಬೇಗ್: ವಿರೋಧ ಪಕ್ಷದ ನಾಯಕರು ಸೂಯಿಸೈಡ್ ಎನ್ನುವ ಬಗ್ಗೆ ಹೇಳಲಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಅದು ಅದರ ಒಂದು ಭಾಗ.

ಶ್ರೀ ಆರ್. ರೋಷನ್‌ಬೇಗ್: ಅವರು ಸೂಯಿಸೈಡ್ ಇಂದು ಆ ರೀತಿ ಹೇಳಲಿಲ್ಲ. ಮರ್ಡರ್ ಬಗ್ಗೆ ಸಬ್‌ಮಿಟ್ ಮಾಡುತ್ತಿರುವುದು. He is making his submission. He has not said that it is a suicide.

ಶ್ರೀ ಬಿ.ಎನ್.ಬಚ್ಚೇಗೌಡ: ಆ form ನಲ್ಲಿ ಬರುವುದಿಲ್ಲ ಸ್ವಾಮಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಏಕೆಂದರೆ, ಇದು public importance ಹೌದು. ಇದು recent occurrence immediately ನಾವು ಸೇರಿದ್ದೇ ಈ ಅಧಿವೇಶನದಲ್ಲಿ. ಆ ದಿವಸ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದಲ್ಲಿ ಇದನ್ನು ತೆಗೆಯಬೇಕಾಗಿತ್ತೇ? ಅವತ್ತು ನಾವು ನೀವು ಮಾತನಾಡಿಕೊಂಡೇ ರಾಜ್ಯಪಾಲರ ಭಾಷಣದ ಮೇಲೆ ಎಷ್ಟು ದಿವಸ ಚರ್ಚೆ ಮಾಡಬೇಕೆಂದುಕೊಂಡೇ ಅದು ಹೋಗಿದೆ. ಅಂದರೆ ಅಂದೇ ಹಠಹಿಡಿದು ಧರಣಿ ಮಾಡಿ ಇದನ್ನು ಪ್ರಸ್ತಾಪ ಮಾಡಬೇಕಾಗಿತ್ತೇ? ನಾವು ಏನು ಕೇಳುತ್ತಿದ್ದೇವೆಂದರೆ, ಇವರು ಕೋರ್ಟ್‌ನ ಮೇಲೆ ಪರಿಣಾಮವಾಗುತ್ತದೆ ಮುಂತಾಗಿ ಹೇಳುತ್ತಿದ್ದಾರಲ್ಲಾ, ಇದು ಚಿಕ್ಕಮಗಳೂರಿನ ಶಾಸಕರಾದ ಶ್ರೀ ಸಿ.ಟಿ.ರವಿಯವರು ಏನು ಎಲ್ಲಾ ಪತ್ರಿಕೆಗಳನ್ನು ತಂದು ತೋರಿಸಿದ್ದೇ ತೋರಿಸಿದ್ದು. ಈಗ ಒಂದನ್ನು ಹೇಳುತ್ತೇನೆ. ಇದು Deccan Herald ಪತ್ರಿಕೆಯ Editorial column ನಲ್ಲಿ ಬಂದಿರುವುದು. ಇಲ್ಲಿ ಏನು ಬರೆದಿದ್ದಾರೆ: Acid Test-but the discovery of her hanging body in a Delhi Flat four days after her disappearance from her home has left many questions unanswered. Did Padmapriya go with Atul Rao of her own volition or was she coerced as claimed by her husband? Why did Bhat not file a missing complaint with the police for well over 48 hours? Why did Home Minister Sri Acharya continually misled the midia about the whereabouts of Padmapriya and the nature of her disappearance. Did the alleged thereats held out by Bhat and his relatives and unrelating police and the gossipy media forced Padmapriya to loose her norms and take her own life or was there any foulplay in her death. ಅದಕ್ಕೆ ಇವರು ಕೂಡ ಧ್ವನಿಗೂಡಿಸಿ ಹೇಳಿದರು. ಅಲ್ಲಿ ಹೋದಾಗಲೇ ಅವರು ಹೇಳಿದ್ದಾರೆ. ಏನು ಹೇಳಿದ್ದಾರೆ, ಇದು Suicide. ಇದು

Murder ಅಲ್ಲ ಎಂದು. ಅಂದರೆ ನೀವು ಹೇಳಿದ ಮಾತಿನ ಪರಿಣಾಮ investigation ನಲ್ಲಾಗಲಿ Court ನಲ್ಲಾಗಲಿ ಆಗುವುದಿಲ್ಲ. ಆದರೆ, ನಾವು ಇಲ್ಲಿ ಹೇಳಿದ್ದು ಅದರ ಮೇಲೆ ಪರಿಣಾಮ ಬೀರುತ್ತದೆ. ಇದು ಯಾವ ನ್ಯಾಯ? ಆದುದರಿಂದ ನಮಗೆ ಇಲ್ಲಿ ಹೇಳುವುದಕ್ಕೆ ನೀವು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಚರ್ಚೆಯೇ ಬೇಡ. ನೀವು ನೇರವಾಗಿ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿ. I do not want to discuss even a single sentence ಅಥವಾ ಈ ವಿಷಯದಲ್ಲಿ ನಾವು publicity ತೆಗೆದುಕೊಳ್ಳಬೇಕೆಂದೇನಿಲ್ಲ. ನಾವು ಒಂದು sentence ಅನ್ನೂ ಮಾತನಾಡುವುದಿಲ್ಲ. ಮಾನ್ಯ ಗೃಹ ಸಚಿವರು ಇದನ್ನು ನೇರವಾಗಿ ಸಿ.ಬಿ.ಐ.ಗೆ refer ಮಾಡುತ್ತೇನೆ. ಎಂದು ಹೇಳಲಿ, unanimously let us refer and we do not want to make politics out of this. ನೀವು contradictory statement ಕೊಟ್ಟಿದ್ದೀರಿ, ಅವರ ಮನೆಗೆ visit ಮಾಡಿದ್ದೀರಿ, ಅವರ ಜೊತೆಯಲ್ಲೇ ಇದ್ದೀರಿ, ನಿಮಗೆ ಅವರ ಪರಿಚಯವಿದೆ, ಎಲ್ಲವೂ ಇದೆ. ಆದ್ದರಿಂದ ನಮಗೆ ಸಂಶಯವಿರತಕ್ಕದ್ದು. ಅದರ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕು, ನಿಷ್ಪಕ್ಷಪಾತವಾಗಿ ಮುಂದಿನ ಹೆಜ್ಜೆಯನ್ನಿಡಬೇಕು ಮತ್ತು ಯಾರು ನಿಜವಾದ culprits ಇದ್ದಾರೋ they should be punished. ಎಂದು ಎಲ್ಲಾ N.G.S. ನವರು, ಹೆಣ್ಣುಮಕ್ಕಳು, organizations demand ಮಾಡುತ್ತಿದ್ದಾರೆ. ಆದ್ದರಿಂದ ಚರ್ಚೆಯೇ ಬೇಡ. ನೀವು ನೇರವಾಗಿ ಸಿ.ಬಿ.ಐ.ಗೆ refer ಮಾಡುತ್ತೇವೆಂದು ಹೇಳಿ. ನಮ್ಮದೇನು ತಕರಾರಿಲ್ಲ. Even ನಿಯಮ 69ಕ್ಕೆ convert ಮಾಡಿಕೊಡುತ್ತೇನೆಂದರೂ ಬೇಡ. ಏಕೆಂದರೆ ನಾವು ಏನೋ ಹೇಳುವುದು, ನೀವು ಏನೋ ಹೇಳುವುದು ಅದೆಲ್ಲ ಏಕೆ? Let us refer it to C.B.I ಇದು ಏನು ರಾಜಕೀಯವಲ್ಲ, ಇದರಲ್ಲೇನೂ ಬೇರೆ ಉದ್ದೇಶವಿಲ್ಲ. ಇದು ಒಂದು criminal case. ಅದೂ ಮೂರು ರಾಜ್ಯಗಳಲ್ಲಿ ನಡೆದಿರುವಂಥದ್ದು. ಇಲ್ಲಿನ ಕಾರನ್ನು ಕುಮಟಾಕ್ಕೆ ತೆಗೆದುಕೊಂಡು ಹೋಗಿ, ಕುಮಟಾದಿಂದ ಗೋವಾಕ್ಕೆ ಹೋಗಿ ಗೋವಾದಿಂದ ದೆಹಲಿಗೆ ಹೋಗಿ ದೆಹಲಿಯಲ್ಲಿ ಆದಂಥ ಹಗರಣ ಇದು. ಇವೆಲ್ಲಾ ಹೇಗೆ ಆಯಿತು? ಏನಾಯಿತು? ಇದರ ಹಿನ್ನೆಲೆ ಏನು? ಯಾರು ಇದ್ದಾರೆ? ಯಾವ ಕಾರಣಕ್ಕಾಗಿ ಆಯಿತು ಎಂಬುದು ಹೊರಕ್ಕೆ ಬರಬೇಕಾದರೆ you refer it to C.B.I.

ಅಧ್ಯಕ್ಷರು: ಇದರ ಬಗ್ಗೆ ವಿರೋಧಪಕ್ಷದ ನಾಯಕರು ಮತ್ತು ಇನ್ನಿತರೇ ಗೌರವಾನ್ವಿತ ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಇದರ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಈ ಕಡೆ ಆಡಳಿತ ಪಕ್ಷದ ಕೆಲವು ಗೌರವಾನ್ವಿತ ಸದಸ್ಯರು ಕೆಲವು Point of Order ಅನ್ನು ಎತ್ತಿದ್ದಾರೆ. ಇದರ ಬಗ್ಗೆ ಮಧ್ಯಾಹ್ನ ಒಂದು ರೂಲಿಂಗ್ ಕೊಡುತ್ತೇವೆ. ಅನಂತರ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳೋಣ.